**ದಿನಾಂಕಃ 10-12-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

ಪಾಟೀ ಸವಾಲುಃ ಸರ್ಕಾರಿ ವಕೀಲರಿಂದ

1. ದಾವಾ ಸ್ವತ್ತುಗಳು ನನಗೆ ಗೊತ್ತು. ಸರ್ಕಾರಿ ಆದೇಶದಂತೆ 9 ಎಕರೆ 20 ಗುಂಟೆ ಜಾಗದಲ್ಲಿ ಜೈಲು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ 75 ರಲ್ಲಿ ಯಾವುದೆ ರಸ್ತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ರಸ್ತೆ ಇರುವುದನ್ನು ನೋಡಿಯೇ ನಾನು ಶಾಂತಯ್ಯನವರ ಜಾಗದಲ್ಲಿ ಒಂದು ನಿವೇಶನವನ್ನು ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಜೈಲಿನ ಕಾಂಪೌಂಡಿನ ಉತ್ತರಕ್ಕೆ ರಸ್ತೆ ಇದೆ ಎಂದರ ಸಾಕ್ಷಿ ಮೊದಲು ಒಳಗಿನಿಂದಲೆ ರಸ್ತೆ ಇದ್ದು ನಂತರ ಒತ್ತುವರಿ ಕಾಂಪೌಂಡ್ ಕಟ್ಟಿದ್ದಾರೆ ಎನ್ನುತ್ತಾರೆ. ಅದೆ ರಸ್ತೆಯನ್ನು ನಾವು ಬಳಸುತ್ತಿದ್ದೆವು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಪ್ರಮಾಣ ಪತ್ರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಐದನೇ ಸಿ. ಜೆ ಮತ್ತು ಜೆ.ಎಂ.ಎಫ್.ಸಿ,
ತುಮಕೂರು